# ತಾರೆಗಳ ತೋಟದಲ್ಲಿ ಕತ್ತಲೆಯ ಹಾವಳಿ ಮರೀಚಿಕೆಯಾಗಿದೆ ಗೆಲುವಿನ ತಂಗಾಳಿ








2023ರ ಕನ್ನಡ ಚಿತ್ರರಂಗದ ಆಗುಹೋಗುಗಳನ್ನು ಗಮನಿಸಿದರೆ, ಸೂತ್ರ ಹರಿದು ದಿಕ್ಕಾಪಾಲಾದ ಗಾಳಿಪಟಗಳು ಸಾಲುಸಾಲಾಗಿ ಕಾಣಿಸುತ್ತವೆ. ಚಿತ್ರರಂಗಕ್ಕೆ ಜೀವ ತುಂಬಬೇಕಾದ, ಚಿತ್ರರಸಿಕರನ್ನು ಚಿತ್ರಮಂದಿರಗಳಿಗೆ ಕರೆತರುವ ಶಕ್ತಿಯಿರುವ ತಾರಾ ವರ್ಚಸ್ಸಿನ ನಾಯಕನಟರಲ್ಲಿ ಅನೇಕರಿಗೆ ಸಿನಿಮಾ ಎನ್ನುವುದು ಪೂರ್ಣಕಾಲಿಕ ಉದ್ಯೋಗವಾಗದೆ, ಹವ್ಯಾಸವಾಗಿ ಪರಿಣಮಿಸಿದಂತಿದೆ. ಆದರ ಫಲವಾಗಿ, ಚಿತ್ರೋದ್ಯಮದಲ್ಲಿ ಮಬ್ಬು ಆವರಿಸಿದೆ, ಚಿತ್ರರಂಗವನ್ನೇ ನೆಚ್ಚಿಕೊಂಡವರು ತಬ್ಬಿಬ್ಬಾಗಿದ್ದಾರೆ; ಪ್ರೇಕ್ಷಕರು ಚಿತ್ರಮಂದಿರಗಳ ದಾರಿಯನ್ನು ಮರೆಯುತ್ತಿದ್ದಾರೆ.

■ **ರಘುನಾಥ ಚ.ಹ.**